ಜಿಲ್ಲೆ ಇಲ್ಲ. ಇತ್ತೀಚೆಗೆ ಅಲ್ಲಿ ಕೆಲವು ಘಟನೆಗಳಾಗಿದೆ. ಆದರೆ ಅವು ಬೇರೆ. ಆದ್ದರಿಂದಲೇ 'ಇಲ್ಲ' ಎಂದು ನಾನು ಉತ್ತರ ಕೊಟ್ಟಿದ್ದೇನೆ.

ಶ್ರೀ ಸಿ. ಬೈರೇಗೌಡ : ಸ್ವಾಮಿ, ಕಾರ್ಯಭಾರಕ್ಕನುಗುಣವಾಗಿ ಕೋಲಾರ ಜಿಲ್ಲೆಯಲ್ಲಿ ಪೋಲೀಸ್ ಬಲ ಇಲ್ಲದಿರುವುದು ನಿಜವೇ? ಎಂದು ನಾನು ಕೇಳಿರುವುದಕ್ಕೆ ಹೌದು ಎಂದು ಉತ್ತರ ಹೇಳಿದ್ದೀರಿ. ಹಾಗಾದರೆ ಷಾರ್ಟೇಜ್ ಇರತಕ್ಕದ್ದು ಎಷ್ಟು? ಎಂದು ಹೇಳುತ್ತೀರಾ?

ಇನ್ನು ಎರಡನೆದಾಗಿ ಕ್ಯಾಲನೂರಿನಲ್ಲಿ ಕಳೆದ 2 ತಿಂಗಳಲ್ಲಿ ನಡೆದಿರುವುದನ್ನು ಹೇಳಿದ್ದೀರಿ. ಇದಕ್ಕೆ ಮುಂಚಿತವಾಗಿ 2 ವರ್ಷಗಳಿಂದ ಅಲ್ಲಿ 2-3 ಸಾರಿ ಘಟನೆಗಳು ನಡೆದಿವೆ. ಆದುದರಿಂದ ಅಲ್ಲಿ ಪೋಲೀಸ್ ಸ್ಟೇಷನ್‌ನ್ನು ಅತಿಶೀಘ್ರವಾಗಿ ತೆರೆಯಬೇಕಾದ ಅವಶ್ಯಕತೆ ಇದೆ. ಇದನ್ನು ಶೀಘ್ರವಾಗಿ ತಾವು ಮಾಡುವುದಕ್ಕೆ ಹೊರಟಿದ್ದೀರಿ. ಈಗ ರಾಜ್ಯದಲ್ಲಿ ಎಷ್ಟೋ ಪೋಲೀಸ್ ಸ್ಟೇಷನ್‌ಗಳನ್ನು ತೆರೆಯಬೇಕೆಂದು ತಾವು ಯೋಚನೆ ಮಾಡಿಕೊಂಡಿದ್ದೀರಿ. ಆ ಯೋಜನೆಯಲ್ಲಿ ಈ ಊರಿಗೂ ಒಂದು ಪೋಲೀಸ್ ಸ್ಟೇಷನ್‌ನ್ನು ಕೊಡುವುದಕ್ಕೆ ತಾವು ಆಶ್ವಾಸನೆ ಕೊಡುತ್ತೀರಾ?

ಶ್ರೀ ಧರ್ಮಸಿಂಗ್ : ಕ್ಯಾಲನೂರಿನಲ್ಲಿ 1978 ಮತ್ತು 1991ರಲ್ಲಿ ಸ್ವಲ್ಪ ಗಲಭೆಗಳು ಆಗಿವೆ. ಆದರೆ ಪೋಲೀಸ್ ಸಿಬ್ಬಂದಿ ಕಡಿಮೆ ಇದೆಯೆಂದು ತಾವು ಏನು ಪ್ರಸ್ತಾಪ ಮಾಡಿದ್ದೀರಿ. ಇಡೀ ರಾಜ್ಯದಲ್ಲಿ ಈ ಪರಿಸ್ಥಿತಿ ಇದೆ. 2245 ಜನಸಂಖ್ಯೆಗೆ ಒಬ್ಬ ಸಿವಿಲ್ ಪೋಲೀಸ್ ಕಾನ್‌ಸ್ಟೇಬಲ್ ಇದ್ದಾನೆ. ಬೇರೆ ರಾಜ್ಯಗಳಲ್ಲಿ ಸ್ವಲ್ಪ ಹೆಚ್ಚಿಗೆ ಇದೆ. ಜನಸಂಖ್ಯೆಗೆ ಅನುಗುಣವಾಗಿ ಎಷ್ಟು ಪೋಲೀಸ್ ಕಾನ್‌ಸ್ಟೇಬಲ್‌ಗಳು ಇರಬೇಕೋ ಅಷ್ಟು ಪ್ರಮಾಣದಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಇಲ್ಲ ಎನ್ನತಕ್ಕ ದೃಷ್ಟಿಯಿಂದ 1991-92ನೇ ಸಾಲಿನಲ್ಲಿ ಇದಕ್ಕೆ ಹೆಚ್ಚಿನ ಆದ್ಯತೆಯನ್ನು ನಾವು ಕೊಟ್ಟಿದ್ದೇವೆ. 1000 ಪೋಲೀಸ್ ಕಾನ್‌ಸ್ಟೇಬಲ್‌ಗಳನ್ನು ಭರ್ತಿ ಮಾಡಬೇಕೆಂದು ಈಗಾಗಲೇ ಸರ್ಕಾರ ಆದೇಶ ಹೊರಡಿಸಿದೆ. ನ್ಯಾಷನಲ್ ಪೋಲೀಸ್ ಕಮಿಷನ್ ಅಂದರೆ ಧರ್ಮವೀರ ಕಮಿಷನ್‌ನವರು ಒಂದು ರಿಪೋರ್ಟ್‌ನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೋಸ್ಕರ ಪೋಲೀಸ್‌ಸ್ಟೇಷನ್ಸ್, ಫೈರ್ ಸ್ಟೇಷನ್ಸ್, ಆರ್ಮ್ಡ್ ಪೋಲೀಸನ್ನು ನೇಮಕ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಕ್ಯಾಲನೂರಿನಲ್ಲಿ 1978ರಲ್ಲಿ ಗಲಭೆಯಾಗಿದೆ. ಅದು ನಮಾಜ್ ಮಾಡುವಾಗ ಮತ್ತು 1991ರಲ್ಲಿ ಕೂಡ ಒಂದು ಗಲಭೆಯಾಗಿದೆ. ಅಲ್ಲಿಯೂ ಕೂಡ ಪೋಲೀಸ್‌ಸ್ಟೇಷನ್‌ನ ಅವಶ್ಯಕತೆ ಇದೆ ಇನ್ನು 5 ವರ್ಷಗಳಲ್ಲಿ 55 ಪೋಲೀಸ್ ಸ್ಟೇಷನ್‌ಗಳನ್ನು ತೆರೆಯಬೇಕೆಂಬ ತೀರ್ಮಾನವನ್ನು ನಾವು ತೆಗೆದುಕೊಂಡು ಆ ಪೈಕಿ 15 ಪೋಲೀಸ್‌ಸ್ಟೇಷನ್‌ಗಳನ್ನು ಕೂಡಲೇ ತೆರೆಯುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಅದರ ಜೊತೆಯಲ್ಲಿ ಇವನ್ನೂ ಕೂಡ ಪರಿಶೀಲಿಸುತ್ತೇವೆ.

ಶ್ರೀ ಸಿ. ಬೈರೇಗೌಡ : ಈ 15ರಲ್ಲಿ ಒಂದನ್ನು ನಮಗೆ ಕೊಡಿ ಎಂದು ನಾನು ಕೇಳುತ್ತಿದ್ದೇವೆ.

ಶ್ರೀ ಧರ್ಮಸಿಂಗ್ : ಮಾಡೋಣ.

ಶ್ರೀ ಸಿ. ಬೈರೇಗೌಡ : ಥ್ಯಾಂಕ್ಯೂ.

1989-90 ಮತ್ತು 90-91ನೇ ಸಾಲಿನಲ್ಲಿ ಬಂದಿರುವ ಅಬಕಾರಿ ಆದಾಯ.

2621 - ಶ್ರೀ ಸಿ. ಬೈರೇಗೌಡ (ಕೋರಟಗೆರೆ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1989-90 ಮತ್ತು 90-91ನೇ ಸಾಲಿನಲ್ಲಿ ಅಬಕಾರಿ ಬಾಬಿನಲ್ಲಿ (ಕರ್ನಾಟಕ) ಸರ್ಕಾರಕ್ಕೆ ಬಂದಿರುವ ಆದಾಯ ಎಷ್ಟು?*

ಆ) *ಕಳೆದ ಸಾಲಿಗಿಂತ 1991-92ನೇ ಸಾಲಿನಲ್ಲಿ ಬಂದಿರುವ ಆದಾಯ ಜಾಸ್ತಿ ಇದೆಯೇ?*

ಇ) *ಹಾಗಿದ್ದಲ್ಲಿ, ಆದಾಯದ ಮೊತ್ತ ಎಷ್ಟು?*

ಈ) *ಇಲ್ಲವಾದಲ್ಲಿ ಇದಕ್ಕೆ ಕಾರಣವೇನು?*

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ)

ವರ್ಷ	*ರೂಪಾಯಿಗಳು (ಕೋಟಿಗಳಲ್ಲಿ)*
1989-90	327.57
1990-91	429.47

ಆ) ಹೌದು

ಇ) ಅಂದಾಜು ಆದಾಯ 555 ಕೋಟಿ ರೂಪಾಯಿಗಳು

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಸಿ. ವೀರಭದ್ರಯ್ಯ ; ಮಾನ್ಯ ಸಚಿವರ ಉತ್ತರ ಸಮಾಧಾನಕರವಾಗಿದೆ.

ಅಧ್ಯಕ್ಷರು : ಸುಮಾವಸಂತ್‌ರವರೇ ನಿಮ್ಮ ಚುಪ್ರ 2611ಕ್ಕೆ ಮಾನ್ಯ ಮಂತ್ರಿಗಳು 15 ದಿವಸ ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀಮತಿ ಸುಮಾವಸಂತ್ : ಅಧ್ಯಕ್ಷರೆ, ನಮ್ಮ ಪ್ರಶ್ನೆಗಳು ಇಲ್ಲಿ ಬರುವುದಿಲ್ಲ. ಬಂದರೆ ಉತ್ತರ ಬರುವುದಿಲ್ಲ. ಎಲ್ಲವೂ ಲಿಖಿತ ಮೂಲಕ ಬರುತ್ತವೆ. ಅಪ್ಪಿತಪ್ಪಿ ಬಂದರೆ ಈ ರೀತಿ ಟೈಂ ಕೇಳುತ್ತಾರೆ.

ಅಧ್ಯಕ್ಷರು : ಮಂತ್ರಿಗಳಿಗೆ 15 ದಿವಸ ಟೈಂ ಬೇಕಂತೆ

ಬನಶಂಕರಿ 3ನೇ ಹಂತಕ್ಕೆ ನೀರು ಸರಬರಾಜು ಮಾಡುವುದು.

2627 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬನಶಂಕರಿ 3ನೇ ಹಂತದಲ್ಲಿ ಬರುವ ಗವಿಪುರ ಗುಟ್ಟಹಳ್ಳಿಯಲ್ಲಿನ ದೋಬಿಘಾಟ್‌ನ ಹತ್ತಿರ ಕಟ್ಟಿರುವ ಮನೆಗಳಿಗೆ ನೀರನ್ನು ಕೊಡದಿರುವುದು ಸರ್ಕಾರಕ್ಕೆ ಗೊತ್ತಿದೆಯೇ?*

ಆ) *ಹಾಗಿದ್ದಲ್ಲಿ ಮೇಲ್ಕಂಡ ಪ್ರದೇಶಕ್ಕೆ ನೀರನ್ನು ಒದಗಿಸಲು ಬೆಂಗಳೂರು ಜಲ ಮಂಡಳಿ ಅಂದಾಜು ಪಟ್ಟಿಯನ್ನು ತಯಾರಿಸಿದೆಯೇ?*

ಇ) *ಹಾಗಿದ್ದಲ್ಲಿ, ಅದರ ಅಂದಾಜು ವೆಚ್ಚ?*

ಈ) *ನಿವಾಸಿಗಳು ಹಣವನ್ನು ಕಟ್ಟಲು ಇಚ್ಛಿಸಿದ್ದಲ್ಲಿ ಆ ನಿವಾಸಿಗಳಿಗೆ ಸರ್ಕಾರವು ನೀರು ಸರಬರಾಜು ಸಂಪರ್ಕವನ್ನು ಒದಗಿಸುವುದೇ?*

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ

ಆ) ಇ) ಉದ್ಭವಿಸುವುದಿಲ್ಲ.

ಈ) ಹೌದು.